**ದಿನಾಂಕಃ 29.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಕೆ ವಕೀಲರಿಂದಃ**

ನಾನು ಕುಪಗಲ್ಲ ಗ್ರಾಮದಲ್ಲಿ ಇರುತ್ತೇನೆ. ನನ್ನ ತಾಯಿಯ ಹೆಸರು ದ್ಯಾಮವ್ವ ಇರುತ್ತದೆ. ಸದರಿಯವಳು ಮೃತಹೊಂದಿ ಎಷ್ಟು ವರ್ಷಗಳು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ 5 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾಯಿಯ ತವರು ಮನೆ ಕುಪಗಲ್ಲ ಇರುತ್ತದೆ. ನಾನು ನನ್ನ ತಂದೆಯನ್ನು ನೋಡಿರುತ್ತೇನೆ, ಆತನ ಹೆಸರು ಯಂಕಪ್ಪ ಎಂದು ಇರುತ್ತದೆ. ಸದರಿ ಯಂಕಪ್ಪ ತೀರಿಕೊಂಡು 7-8 ವರ್ಷಗಳು ಆಗಿರುತ್ತವೆ. ಈ ದಾವೆಗೆ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಯಂಕಪ್ಪನಿಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಮೊದಲನೇಯ ಹೆಂಡತಿ ಸಂಜೀವಮ್ಮ ಅಲ್ಲ. ಆದರೆ ಹೆಂಡತಿ ಇರುತ್ತಾಳೆ ಎಂದರೆ ನಿಜ. ಸಂಜೀವಮ್ಮನಿಗೆ ಮರೆಮ್ಮ, ಹಣಮಂತ ಮತ್ತು ಮಾನಯ್ಯ ಎನ್ನುವ ಮೂರು ಮಕ್ಕಳು ಇರುತ್ತಾರೆ ಎಂದರೆ ನಿಜ. ಸದರಿಯವರ ಪೈಕಿ ಮರೆಮ್ಮ ತೀರಿಕೊಂಡಿರುತ್ತಾಳೆ ಎಂದರೆ ನಿಜ. ಮರೆಮ್ಮನಿಗೆ ತಿಮ್ಮಯ್ಯ ಮತ್ತು ಬಸಯ್ಯ ಎನ್ನುವ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ನಿಜ. ತಿಮ್ಮಯ್ಯ ಮತ್ತು ಬಸಯ್ಯ ಇವರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ನಿಜ.

02. ನನ್ನ ತಾಯಿ ಎರಡನೇ ಹೆಂಡತಿ ಇರುತ್ತಾಳೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಸೇರಿ ಕೆಳನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಪ್ರಕರಣ ಸಂಖ್ಯೆ 104/IV/1970 ದಾಖಲಾಸಿರುತ್ತೇವೆ, ಸದರಿ ಪ್ರರಕಣವನ್ನು ಬಸಲಿಂಗಪ್ಪ ಎನ್ನುವ ನ್ಯಾಯವಾದಿಗಳ ಮುಖಾಂತರ ಪ್ರಕರಣನ್ನು ನಡೆಸಿದ್ದೆನು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ನನ್ನ ವಯಸ್ಸು 3 ವರ್ಷ ನಡೆಯುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ತಾನು 2 ನೇ ಹೆಂಡತಿ ಇದ್ದು,

ಕೆಲನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದಳು, ಸದರಿ ಪ್ರಕರಣದಲ್ಲಿ ನನ್ನ ತಾಯಿ 2ನೇ ಹೆಂಡತಿ ಎನ್ನುವುದನ್ನು ಒಪ್ಪಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದ ನಂತರ ನನ್ನ ತಾಯಿ ಕ್ರಿ.ಮಿ ನಂ.20/1971 ನೇದ್ದನ್ನು ಸದರಿ ಬಸಲಿಂಗಪ್ಪ ವಕೀಲರ ಮುಖಾಂತರ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಎರಡು ಪ್ರರಕಣದಲ್ಲಿ ನನ್ನ ತಂದೆ ದಿನಾಂಕ 20-04-1971 ರಂದು ಮತ್ತು 28-10-1971 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎರಡು ಪ್ರಕರಣಗಳು ವಜಾ ಆಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತಕರಾರಿನಲ್ಲಿ ನನ್ನ ತಂದೆ ಸರ್ವೆ ನಂ.16/1/ಆ ಮತ್ತು ಸರ್ವೆ ನಂ.23/ಅ ಕ್ಷೇತ್ರ 1 ಎಕರೆ 24 ಗುಂಟೆ ಮತ್ತು 05 ಎಕರೆ ಜಮೀನುಗಳನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕುಪಗಲ್ಲ ಗ್ರಾಮದಲ್ಲಿ ಸರ್ವೆ ನಂ.16/1/ಆ ಇರುತ್ತದೆ ಎಂದರೆ ಸರಿ. ಸದರಿ ಜಮೀನು ನಿಮ್ಮ ತಾಯಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮೊದಲು ನನ್ನ ಅಜ್ಜನ ಹೆಸರಿನಲ್ಲಿ ಇತ್ತು ನಂತರ ನನ್ನ ತಾಯಿಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ನನ್ನ ತಾಯಿ 2ನೇ ಹೆಂಡತಿ ಆಗಿರುವುದರಿಂದ ಸದರಿಯವಳ ಹೆಸರಿನಲ್ಲಿ ಸರ್ವೆ ನಂ.16/1/ಆ ಜಮೀನನ್ನು ಖರೀದಿ ಮಾಡಿರತ್ತಾನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನಮ್ಮ ಅಜ್ಜನ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ಅಜ್ಜನ ಜಮೀನು ಅಂತಾ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಎಲ್ಲಾ ವಿಷಯಗಳು 1971 ರಲ್ಲಿ ನನ್ನ ತಾಯಿಗೆ ಗೊತ್ತಿರುವುದರಿಂದ ಮತ್ತು ಸದರಿ ಜಮೀನನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದರಿಂದ ಸದರಿ ಪ್ರಕರಣಗಳನ್ನು ವಜಾ ಮಾಡಿಸಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ತಾಯಿ 2 ನೇ ಹೆಂಡತಿ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸಹಿತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡು ಪ್ರಕರಣಗಳ ಬಗ್ಗೆ ಕೆಳನ್ಯಾಯಾಲಯಲದಲ್ಲಿ ಕಡತಗಳನ್ನು ಪರಿಶೀಲಿಸಿ ನೋಡಿದ್ದೇನೆ. ಸರ್ವೆ ನಂ.16/1/ಆ ನೇದ್ದನ್ನು ಮಾರಾಟ ಮಾಡಿರುವುದಿಲ್ಲ. ನನಗೆ ಮೇಲೆ ಹೇಳಿದ ಎಲ್ಲಾ ಸಂಗತಿ ಗೊತ್ತಿದ್ದು ಮತ್ತು ನನ್ನ ತಾಯಿ 2 ನೇ ಹೆಂಡತಿ ಇದ್ದರೂ ಸಹಿತ ಎಲ್ಲ ವಿಷಯವನ್ನು ಮರೆಮಾಚಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

03. ನಾನು 4 ಜಮೀನುಗಳಿಗೆ ಸಂಬಂಧಿಸಿದಂತೆ ದಾವೆ ಮಾಡಿರುತ್ತೇನೆ. ನಾನು ಓದದೇ ಇರುವುದರಿಂದ ಸದರಿ ಜಮೀನಿನ ಸರ್ವೆ ನಂಬರಗಳು ಮತ್ತು ಕ್ಷೇತ್ರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನುಗಳ ಚಕ್ಕಬಂದಿ ನನಗೆ ಗೊತ್ತಿರುವುದಿಲ್ಲ, ಆದರೆ ಹೋಗುತ್ತೇವೆ ಎಂದು ನುಡಿಯುತ್ತಾರೆ. ನಾನು 3-4 ವರ್ಷಗಳಿಂದ ಜಮೀನುಗಳ ಕಡೆ ಹೋಗಿರುವುದಿಲ್ಲ. ನನ್ನ ತಾಯಿ ತೀರಿಕೊಂಡು 6-7 ವರ್ಷಗಳು ಆಗಿರುತ್ತವೆ. ನನ್ನ ತಾಯಿ ತೀರಿಕೊಂಡ ನಂತರ ಜಮೀನುಗಳನ್ನು ನನ್ನ ಹೆಸರಿನಲ್ಲಿ ದಾಖಲಿಸಲು ನಾನು ಅರ್ಜಿ ಕೊಟ್ಟಿರುವುದಿಲ್ಲ. ನಾನು 2 ನೇ ಹೆಂಡತಿ ಮಗಳು ಇರುವುದರಿಂದ ನನಗೆ ಆಸ್ತಿಯಲ್ಲಿ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.16 ಜಮೀನನ್ನು ನನ್ನ ತಾಯಿಯ ಹೆಸರಿನಲ್ಲಿ ನೋಂದಾವಣೆ ಮಾಡಿ ನನ್ನ ತಾಯಿಯೊಂದಿಗೆ ಸಂಬಂಧವನ್ನು ನನ್ನ ತಂದೆ ಕಳೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.